ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 24 ನೇ ಮಾರ್ಚ್, 2020

ಪೌರಾಡಳಿತ ಇಲಾಖೆಯ ಅಧೀನದಲ್ಲಿ ಬರುವ ನಿಗಮಗಳ ಬಗ್ಗೆ

ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ(ಪದವೀಧರರ ಕ್ಷೇತ್ರ):-

1564 (1844) ಮಾನ್ಯ ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪೌರಾಡಳಿತ ಇಲಾಖೆಯ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು/ಕಂಪನಿಗಳು ಶಾಸನಬದ್ಧ ಮಂಡಳಿಗಳು ಉದ್ದಿಮೆಗಳು, ಅಂಗ ಸಂಸ್ಥೆಗಳು ಮತ್ತು ಸೊಸೈಟಿಗಳು ಹಾಗೂ ಇತರೆ ಎಷ್ಟಿವೆ; ಅವು ಯಾವುವು ; ವಿವರವಾಗಿ ಇಲಾಖೆವಾರು, ಕೇಂದ್ರ ಕಚೇರಿ, ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಒಳಗೊಂಡಂತೆ ವಿವರವಾದ ಮಾಹಿತಿ ನೀಡುವುದು ;

(ಆ) ಸದರಿ ಇಲಾಖೆಯಡಿ ಹಾಲಿ ಜಾರಿಯಲ್ಲಿರುವ ಕೇಂದ್ರ ಸರ್ಕಾರ ಪುರಸ್ಕೃತ/ಪ್ರಾಯೋಜಿತ/ಇತರೆ ಯೋಜನೆಗಳಾವುವು ; 2019-20ನೇ ಸಾಲಿನಲ್ಲಿ ಸದರಿ ಯೋಜನೆಗಳಿಗೆ ಎಷ್ಟು ಹಣ ಬಂದಿದೆ; ಇನ್ನೂ ಎಷ್ಟು ಹಣ ಬರಬೇಕಿದೆ ; ಯೋಜನಾವಾರು ಮಾಹಿತಿ ನೀಡುವುದು ;

(ಇ) ಕಳೆದ 3 ವರ್ಷಗಳಿಂದ ಇಲಾಖೆಯ ಅಧೀನದಲ್ಲಿ ಬರುವ ಸಂಸ್ಥೆಗಳು ಎಷ್ಟು ಹಣವನ್ನು ಬ್ಯಾಂಕ್‌ನಲ್ಲಿ ಎಫ್.ಡಿ. ಇಟ್ಟಿವೆ ; ಎಫ್.ಡಿ. ಇಡಲು ಕಾರಣಗಳೇನು; ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ ; ವಿವರವಾದ ಮಾಹಿತಿ ನೀಡುವುದು ;

(ಈ) ಎಫ್.ಡಿ ಇಟ್ಟ ಹಣವನ್ನು ಸಂಬಂಧಪಟ್ಟ ಯೋಜನೆಗಳಿಗೆ ಯಾವಾಗ ಉಪಯೋಗಿಸಲಾಗುವುದು ಸಂಸ್ಥೆವಾರು ಮಾಹಿತಿ ನೀಡುವುದು ?